ಸಂ : ಆರ್ ಆರ್ ಟಿ/ 31 /2006-07.

ಪ್ರಾದೇಶಿಕ ಆಯುಕ್ತರ ಕಛೇರಿ,
ಮೈಸೂರು ವಿಭಾಗ, ಮೈಸೂರು,
ದಿನಾಂಕ: 28-09-2006.

**ಸುತ್ತೋಲೆ**

**ವಿಷಯ** :- 1966ರ ಭೂ ಕಂದಾಯ ನಿಯಮಾವಳಿಗಳಡಿಯಲ್ಲಿ ಖಾತೆ ವಿವಾದಾಸ್ಪದ ಪ್ರಕರಣಗಳ ತೀರ್ಮಾನದಲ್ಲಿ ವಿಳಂಬವನ್ನು ತಪ್ಪಿಸುವ ಬಗ್ಗೆ.

*****

ಇತ್ತೀಚೆಗೆ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು ಕಛೇರಿಯ ಸಮಗ್ರ ತಪಾಸಣೆ ನಡೆಸಿದ ವೇಳೆಯಲ್ಲಿ ತಾಲ್ಲೂಕು ಕಛೇರಿಯಲ್ಲಿ ತಕರಾರು ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿರುವುದನ್ನು ಮತ್ತು ಅನೇಕ ಪ್ರಕರಣಗಳು ವರ್ಷಾನುಗಟ್ಟಲೆ ಬಾಕಿ ಇರುವುದನ್ನು ಗಮನಿಸಲಾಗಿದೆ. ತಹಸೀಲ್ದಾರ್‌ಗಳು, 1966 ರ ಭೂ ಕಂದಾಯ ನಿಯಮಾವಳಿಗಳ ಅಧ್ಯಾಯ IX ರ ನಿಯಮ 67, 68 ಮತ್ತು ಅಧ್ಯಾಯ VIII ರ ನಿಯಮ 43 ರಲ್ಲಿ ವಿವರಿಸಿಯಂತೆ ತಕರಾರು ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಬೇಕಿದೆ. ಆದರೆ ತಹಸೀಲ್ದಾರ್‌ಗಳು ಈ ಪ್ರಕರಣಗಳನ್ನು ನ್ಯಾಯಾಲಯಗಳಲ್ಲಿ ನಡೆಸುವ ಪ್ರಕರಣಗಳ ವಿಚಾರಣೆಯಂತೆ ದೀರ್ಘವಾದ ಸಾಕ್ಷಿ ವಿಚಾರಣೆ, ದಾಖಲೆಗಳ ಪರಿಶೀಲನೆ,ವಾದ ಪ್ರತಿವಾದಗಳ ನಂತರ ಇತ್ಯರ್ಥಪಡಿಸುತ್ತಿರುವುದು ತಪಾಸಣಾ ವೇಳೆಯಲ್ಲಿ ತಿಳಿದು ಬಂದಿದೆ. ಪ್ರಬಲವಾದ ಕಾರಣಗಳಿಲ್ಲದೆ ಪ್ರಕರಣಗಳನ್ನು ಹಲವಾರು ಬಾರಿ ಮುಂದೂಡಲಾಗುತ್ತಿರುವುದನ್ನು ಸಹ ಗಮನಿಸಿದೆ.

ತಕರಾರು ಪ್ರಕರಣಗಳನ್ನು ಇತ್ಯರ್ಥಪಡಿಸುವ ಸಂಬಂಧಪಟ್ಟ ಶಾಖೆಯ ಶಿರಸ್ತೇದಾರರು ಅಥವಾ ತಹಸೀಲ್ದಾರ್ ರವರಾಗಲಿ ತಕರಾರಿನ ಪ್ರಕರಣದ ವಿಚಾರಣೆಗೆ ಒಂದು ದಿನ ನಿಗದಿಪಡಿಸಿ ಗೊತ್ತುಪಡಿಸಿದ ದಿನದಂದು ಹಾಜರಿರುವಂತೆ ಎಲ್ಲಾ ಪಕ್ಷಕಾರರಿಗೆ ತಿಳುವಳಿಕೆ ಪತ್ರ ಜಾರಿ ಮಾಡಿಸಬೇಕು. ಅವಶ್ಯವಿದ್ದಲ್ಲಿ ಎಲ್ಲರಿಗೂ ನೋಟೀಸು ನೀಡಿ ಸ್ಥಳ ಪರಿಶೀಲನೆ ನಡೆಸಬೇಕು. ಕಛೇರಿಯಲ್ಲಿ ಕುಳಿತು ವಿಚಾರಣೆ ಮಾಡದೆ ಸಂಬಂಧಿಸಿದ ಗ್ರಾಮ ಅಥವಾ ಹೋಬಳಿ ಕೇಂದ್ರದಲ್ಲಿ ಮೌಖಿಕವಾಗಿ ಮತ್ತು ಬಹಿರಂಗವಾಗಿ ವಿಚಾರಣೆ ನಡೆಸಬೇಕು. ಪಕ್ಷಕಾರರ ಹೇಳಿಕೆ ದಾಖಲು ಮಾಡಿಕೊಳ್ಳದೆ ವಿಚಾರಣಾಧಿಕಾರಿಯೇ ಪಕ್ಷಕಾರರು ತಿಳಿಸಿದ ವಿಷಯವನ್ನು ಸಂಕ್ಷಿಪ್ತವಾಗಿ ತಕರಾರು ವಹಿಯಲ್ಲಿ ನಮೂದಿಸಿ ತೀರ್ಮಾನಕ್ಕೆ ಬರುವ ಕಾರಣವನ್ನು ಮತ್ತು ತೀರ್ಮಾನವನ್ನು ವಹಿಯಲ್ಲಿಯೇ ದಾಖಲು ಮಾಡಬೇಕು ಮತ್ತು ಹಾಜರಿರುವ ಪಕ್ಷಕಾರರಿಗೆ ತೀರ್ಮಾನದ ವಿವರ ತಿಳಿಸಿ ಅದರಲ್ಲೇ ಸಹಿ ಪಡೆಯಬೇಕು. ಗೈರು ಹಾಜರಿರುವ ಪಕ್ಷಕಾರರಿಗೆ ತೀರ್ಮಾನವನ್ನು ಲಿಖಿತವಾಗಿ ಅಂಚೆ ಮುಖಾಂತರ ಕಳುಹಿಸಿ ವಹಿಯಲ್ಲಿ ದಿನಾಂಕ ದಾಖಲಿಸಬೇಕು. ವಿಚಾರಣೆಯು ನಿಯಮ 68 ರಂತೆ ಮೌಖಿಕವಾಗಿ ಬಹಿರಂಗವಾಗಿ ನಡೆಯಬೇಕೆ ಹೊರತು ತಹಸೀಲ್ದಾರ್/ ಶಿರಸ್ತೇದಾರರವರ ಕೊಠಡಿಯಲ್ಲಲ್ಲ. ಆದ್ದರಿಂದ ತಕರಾರು ಪ್ರಕರಣಗಳನ್ನು ಇತ್ಯರ್ಥಪಡಿಸುವ ಅಧಿಕಾರ ಹೊಂದಿರುವ ಎಲ್ಲಾ ಸಕ್ಷಮ ಪ್ರಾಧಿಕಾರಿಗಳು ಈ ವಿವರಗಳನ್ನು ಗಮನಿಸಿ ತಕರಾರು ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ತಿಳಿಸಿದೆ.

ಪ್ರಾದೇಶಿಕ ಆಯುಕ್ತರು,
ಮೈಸೂರುವಿಭಾಗ,ಮೈಸೂರು

ಪ್ರತಿಯನ್ನು:1. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಿದೆ.

2. ಈ ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳು : ಉಪ ವಿಭಾಗಾಧಿಕಾರಿಗಳು : ತಹಸೀಲ್ದಾರ್ ರವರುಗಳಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ರವಾನಿಸಿದೆ.

RRT-hl

RP
6/10/06

7766
7/10/06